ನೀರನ್ನು ಬಿಡದಿದ್ದರೆ ನಮಗೆ ತೊಂದರೆಯಾಗುತ್ತದೆ. ಅವರು ಸತ್ಯಾಗ್ರಹವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆ ದೃಷ್ಟಿಯಿಂದ ನಮಗೆ ಬೇಕಾಗಿರತಕ್ಕ ನೀರನ್ನು ಉಳಿಸಿಕೊಂಡು ಮುಂದಿನ ವಿಚಾರ ಮಾಡಬೇಕೆನ್ನುವ ಆಗ್ರಹವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದ ವಿಚಾರ. ನಿಖರವಾದ ಮಾಹಿತಿಗಾಗಿ ಕಾಯುತ್ತಿದ್ದೇವೆ. ಅದಕ್ಕಾಗಿ ಮಧ್ಯಾಹ್ನ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ನಾನು ಪದೇ ಪದೇ ಹೇಳಿದೆ, ನೀರು ಬಿಟ್ಟಿದ್ದೀರಿ ನಿಮಗೆ ಮಾಹಿತಿ ಸಿಕ್ಕಿಲ್ಲವೆಂದು. ಒಂದು ಹನಿ ನೀರು ಬಿಟ್ಟಿಲ್ಲವೆಂದು ಹೇಳಿ ಇನ್ನೂ 48 ಗಂಟೆಗಳು ಆಗಿಲ್ಲ. ಈವತ್ತು ಫೋಟೋಗಳ ಸಮೇತ ಪತ್ರಿಕೆಗಳಲ್ಲಿ ಪ್ರಕಟ ಮಾಡಿದ್ದಾರೆ.

(ಆ) ದ.ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ನೆಟ್ಟಾಣೆ ಇಂಡಿಯನ್ ಪ್ಲೇವುಡ್ ಕಾರ್ಖಾನೆ ಮುಚ್ಚಿರುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :- ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದ ವಿಚಾರ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದ ನೆಟ್ಟಾಣೆ ಇಂಡಿಯನ್ ಪ್ಲೇವುಡ್ ಮ್ಯಾನುಫ್ಯಾಕ್ಚರ್ ಕಂಪನಿಯನ್ನು ಮುಚ್ಚಿದ್ದಾರೆ. ಸುಮಾರು 35 ಕುಟುಂಬಗಳು ನಿರ್ಗತಿಕರಾಗಿದ್ದಾರೆ. ಪ್ರಕೃತಿ ಏನಾಗಿದೆ ಅಂದರೆ ಆ ಜಾಗವನ್ನು ಬಿಟ್ಟು ಹೋಗಬೇಕು, ಅಲ್ಲಿನ ಕ್ವಾಟ್ರಸ್ ಖಾಲಿ ಮಾಡಬೇಕೆಂದು ಹೇಳಿದ್ದಾರೆ. ನಿಮಗೆ ಗ್ರಾಚ್ಯುಟಿ ಮತ್ತಿತರೆ ಸೌಲಭ್ಯಗಳು ಸಿಗಬೇಕಾದರೆ ನೀವು ಕ್ವಾರ್ಟರ್ಸ್ ಖಾಲಿ ಮಾಡಿ ಅದಕ್ಕೆ ಬೀಗ ಹಾಕಿ ಅದರ ಕೀಲಿಯನ್ನು ಕೊಡಬೇಕು. ಆಗ ಮಾತ್ರ ನಿಮಗೆ ಕೊಡಬೇಕಾದುದನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ಯಾವುದೇ ಕೆಲಸವಿಲ್ಲದೆ ಮೂರು ಹೊತ್ತಿನ ಊಟಕ್ಕೆ ಗತಿಯಿಲ್ಲದಂತಾಗಿದೆ. ಇದರ ಮಧ್ಯದಲ್ಲಿ ಇವರಿಗೆ ಇರಲಿಕ್ಕೆ ಜಾಗ ಕೊಡಬೇಕೆನ್ನುವ ದೃಷ್ಟಿಯಿಂದ ನೇರವಾಗಿ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿ ಕೇಳಿದಾಗ ಅವರು ಸರ್ಕಾರಿ ಜಾಗದಲ್ಲಿ ಜಾಗ ಕೊಡುತ್ತೇವೆಂದು ಜಿಲ್ಲಾಧಿಕಾರಿಗಳು ಮಳೆ ಬಂದ ಕಾರಣ ಅವರಿಗೆ ಬೇರೆ ಜಾಗದಲ್ಲಿ ಟೆಂಟ್‌ಗಳನ್ನು ಹಾಕಿ ಕುಳಿತುಕೊಳ್ಳಿಯೆಂದು ಕಂದಾಯ ಇಲಾಖೆಯವರು ಬಹಳ ಪ್ರೋತ್ಸಾಹ ಕೊಟ್ಟು ಅವೊಂದು ಜಾಗವನ್ನು ತೆಗೆದುಕೊಳ್ಳುವುದಕ್ಕೆ ಗ್ರಾಮಲೆಕ್ಕಿಗರ ಮುಖಾಂತರ ಜಾಗವನ್ನು ಸರ್ವೆ ಮಾಡಿಸಿ ಕೊಟ್ಟಿದ್ದಾರೆ. ಅವರು ಏನು ಮಾಡಿದ್ದಾರೆಂದರೆ ಕ್ವಾರ್ಟರ್ಸ್‌ನಿಂದ ಹೊರಗೆ ಬಂದು ಸರ್ವೆ ನಂಬರ್ 2ರಲ್ಲಿ ಕುಳಿತಿದ್ದಾರೆ. ತಕ್ಷಣ ಪಕ್ಕದಲ್ಲಿರತಕ್ಕ ಅರಣ್ಯ ಇಲಾಖೆಯವರು ಏನು ಹೇಳಿದ್ದಾರೆಂದರೆ ಆ ಜಾಗ ನಮಗೆ ಸೇರಿದ್ದು ಎಂದು ಹೇಳುವಂತಹ ರೀತಿಯಲ್ಲಿ ಏಕಾಏಕಿ 35 ಮನೆಗಳನ್ನು ಕಂದಾಯ ಇಲಾಖೆಯವರು ಟೆಂಟ್‌ಹಾಕಿ ಕೊಟ್ಟಿದ್ದರೋ ಅಲ್ಲಿಂದ ಅವರನ್ನು ಅಕ್ರಮವಾಗಿ ಹೊರಗೆ ಹಾಕಿದ್ದಾರೆ. ಇದು ನಿಜವಾಗಿಯೂ ಮನಸ್ಸಿಗೆ ತುಂಬಾ ನೋವು ಆಗತಕ್ಕಂತಹದ್ದು. ಅಲ್ಲಿರತಕ್ಕ ಮಕ್ಕಳು ಹೆಂಗಸರನ್ನೆಲ್ಲಾ ಮನೆಗಳಿಂದ ಹೊರಗೆ ಹಾಕಿ ಅವರು ಮಳೆಯಲ್ಲಿ ನೆನೆದು ಅವರು ಇರುವಂತಹ ಸ್ಥಿತಿಯನ್ನು ನೋಡಿದರೆ ತುಂಬಾ

ನೋವಾಗುತ್ತದೆ, ಇಂತಹ ಸಂಗತಿಗಳಾಗಿವೆ. ನಾನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಹತ್ತಿರ ಮಾತನಾಡಿದೆ. ಅವರು ಸರ್ಕಾರಿ ಜಾಗ ಅವರಿಗೆ ಕೊಡಬಹುದೆಂದು ಹೇಳಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ನೇರವಾಗಿ ಅಲ್ಲಿಗೆ ಬಂದು ಆ ಡೇರೆಗಳನ್ನು ಕಿತ್ತುಹಾಕುವಂತಹ ಕೆಲಸ ಮಾಡಿದ್ದಾರೆ. ಊರಿನ 200-300 ಜನ ಸೇರಿ ಪ್ರತಿಭಟನೆ ಮಾಡಿ ಆ ಡೇರೆಗಳನ್ನು ತೆಗೆಯಬಾರದೆಂದು ಹೇಳಿದಾಗ, ನಿಮಗೆ ಅಷ್ಟು ಕನಿಕರವಿದ್ದರೆ ನಿಮ್ಮ ಮನೆಗಳಲ್ಲಿ ಜಾಗ ಕೊಡಿಯೆಂದು ಹೇಳುವಂತಹ ಧಾಟಿಯಲ್ಲಿ ಅವರು ಸವಾರಿ ಮಾಡಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೂ ಕೂಡ ತಂದಿದ್ದೇನೆ. ಸರ್ವೆ ನಂ. 2 ಏನಿದೆ ಅದು ಸರ್ಕಾರಿ ಜಾಗ, ಆ ಜಾಗದಲ್ಲಿ ಬೇರೆಯವರಿಗೆ ಈಗಾಗಲೇ ಮಂಜೂರಾತಿ ಕೂಡ ಆಗಿದೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಆ ನಿರ್ಗತಿಕರ ಬಗ್ಗೆ ಸರ್ಕಾರ ಗಮನ ಕೊಡಬೇಕು. ಈಗ ಐ.ಪಿ.ಎಂ ನವರು ಏನು ಹೇಳುತ್ತಿದ್ದಾರೆ ಎಂದರೆ ನಿಮಗೆ ಒಂದು ನಯಾಪೈಸೆ ಕೂಡ ನಮಗೆ ಕೊಡುವುದಕ್ಕೆ ಆಗುವುದಿಲ್ಲ. ನೀವು ನಿಮ್ಮ ಜಾಗವನ್ನು ಖಾಲಿ ಮಾಡಿ ಕ್ವಾಟರ್ಸ್‌ನಿಂದ ಹೊರಗೆ ಹೋದರೆ ಮಾತ್ರ ನಾವು ದುಡ್ಡು ಕೊಡುತ್ತೇವೆ. ಕೀಲಿ ನಮ್ಮ ಕೈಗೆ ಕೊಟ್ಟರೆ ದುಡ್ಡು ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಒಂದು ಕಡೆಯಿಂದ ಅವರಿಗೆ ಕೈಗೆ ಕೆಲಸ ಇಲ್ಲ. ಇನ್ನೊಂದು ಕಡೆಯಿಂದ ಸಾಲ ಮಾಡಿ ಅವರು ಹಾಕಿದಂಥ ಟೆಂಟ್ ಅದನ್ನೆಲ್ಲಾ ಅರಣ್ಯ ಇಲಾಖೆಯವರು ಕಿತ್ತು ಹಾಕಿದ್ದಾರೆ. ನಾನು ಆಗ್ರಹಮಾಡುವಂಥಾದ್ದು ಇಷ್ಟೆ. ನಾನು ಸಂಬಂಧಪಟ್ಟ ದಾಖಲಾತಿಗಳನ್ನು ಕಂದಾಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ನಿಜವಾಗಿಯೂ ನಿಮ್ಮ ಇಲಾಖೆಯ ಎಲ್ಲರೂ ಕೂಡ ಸಹಕಾರ ಮಾಡಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಅಕ್ರಮವಾಗಿ ಇದು ನಮ್ಮ ಜಾಗವೆಂದು ಹೇಳುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳೂ ಕೂಡ ನೇರವಾಗಿ ಇದರಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಅವರು ಏನು ಮಾಡಿದ್ದಾರೆ ಎಂದರೆ ಅರಣ್ಯ ಇಲಾಖೆಯವರಿಗೆ ಸಂಬಂಧಪಟ್ಟ ದಾಖಲೆಗಳು ಇದ್ದರೆ ಹಾಜರು ಮಾಡಿ, ಖಂಡಿತ ನಾವು ಅವರನ್ನು ತೆರವು ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ಇಲ್ಲದಿದ್ದರೆ ನೀವು ಅಲ್ಲಿಗೆ ಹೋಗಬಾರದು ಎಂದು ಪೊಲೀಸ್ ಇಲಾಖೆಯವರು ರಕ್ಷಣೆ ಏನೋ ಕೊಟ್ಟಿದ್ದಾರೆ. ಇದೇ ರೀತಿ ರಕ್ಷಣೆಯನ್ನು ಕಂದಾಯ ಇಲಾಖೆಯವರು ಕೊಟ್ಟಿದ್ದಾರೆ. ಆದರೆ ಅರಣ್ಯ ಇಲಾಖೆಯವರ ದರ್ಬಾರಿನಿಂದಾಗಿ ಈ 30-35 ಮನೆಗಳವರು ಇವತ್ತು ಕಷ್ಟದಲ್ಲಿದ್ದಾರೆ. ತಾವು ಇದನ್ನು ನೋಡಬೇಕು. ತಾವು ನೋಡಿದ್ದರೆ ಈಗಾಗಲೇ ಆದೇಶ ಮಾಡುತ್ತಿದ್ದಿರೇನೋ, ನನಗೆ ಗೊತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ನಿರ್ಗತಿಕರು ಇದ್ದಾರೆ. ಅವರೆಲ್ಲರೂ ಟೆಂಟ್ ಹಾಕಿ, ಒಂದು ಕಡೆ ಸೇರಿ ಅನ್ನ ಮಾಡಿಕೊಂಡು ಊಟ ಮಾಡುವಂಥ ಗತಿಗೆ ಬಂದಿದ್ದಾರೆ. ಅವರಿಗೆ ಕೈಯಲ್ಲಿ ದುಡ್ಡಿಲ್ಲ. ಅದೊಂದು ರೀತಿಯಲ್ಲಿ ನಿರಾಶ್ರಿತರ ಶಿಬಿರ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ತಕ್ಷಣ ಇದಕ್ಕೆ ಸ್ಪಂದಿಸಿ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಡಬೇಕಾಗುತ್ತದೆ. ಅವರಿಗೆ ಜಾಗವನ್ನು ಕೊಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಹೀಗೆ ಬರ್ಬರವಾಗಿ ಆ ಒಂದು ಜಾಗದಿಂದ ಅವರನ್ನು ಖಾಲಿ ಮಾಡಿಸಿದಂಥ ಅರಣ್ಯ ಇಲಾಖೆಯ ಯಾರು ಅಧಿಕಾರಿಗಳಿದ್ದಾರೆ, ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಲಿ ನಿಜವಾಗಿಯೂ ಪೊಲೀಸ್ ಇಲಾಖೆ ಮತ್ತು ಕಂದಾಯ ಇಲಾಖೆಗೆ ಆ ಜನ ಋಣಿಯಾಗಿದ್ದಾರೆ. ಅವರ ರಕ್ಷಣೆಯಲ್ಲಿ ಅವರು ಇದ್ದಾರೆ. ಈ ದೃಷ್ಟಿಕೋನದಿಂದ ಈ ವ್ಯವಸ್ಥೆ ತಕ್ಷಣ ಆಗಬೇಕು. ಈಗ ಮಳೆ ಬರುತ್ತಿದೆ. ಬೇರೆ ಜಾಗದಲ್ಲಿ ಅವರಿಗೆ ಕನಿಷ್ಟ

ಏನಾದರೂ ಟೆಂಟ್ ಹಾಕಿಕೊಳ್ಳುವುದಕ್ಕಾದರೂ ಅವಕಾಶ ಮಾಡಿಕೊಡಬೇಕು. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೂ ಕೂಡ ಕಂದಾಯ ಇಲಾಖೆಗೆ ಕಳುಹಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ. ಅರಣ್ಯ ಮಂತ್ರಿಗಳನ್ನೂ ಕೂಡ ಇಲ್ಲೇ ಇದ್ದಾರೆ. ತಮ್ಮ ಅರಣ್ಯ ಇಲಾಖೆಯವರಿಗೆ ತಾವು ತಕ್ಷಣ ಹೇಳಬೇಕು. ಏಕೆಂದರೆ ಒಂದು ವೇಳೆ ಅವರು ಅನಧಿಕೃತವಾಗಿ ಕುಳಿತಿದ್ದಾರೆ ಎಂದರೆ ಈ ರೀತಿಯಾಗಿ ಬಲಾತ್ಕಾರದಿಂದ ಆ ನಿರ್ಗತಿಕರನ್ನು ಹೊರಗೆ ಹಾಕುವುದು, ತೊಂದರೆ ಕೊಡುವುದು ಅಷ್ಟು ಸೂಕ್ತವಾದ ವಿಚಾರ ಅಲ್ಲವೆಂದು ತಮ್ಮ ಗಮನಕ್ಕೆ ತಂದು, ತಾವೂ ಕೂಡ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಮಂತ್ರಿಗಳು) :- ಮಾನ್ಯ ಸದಸ್ಯರು ದಾಖಲೆಗಳನ್ನು ಕೊಟ್ಟರೆ ಪರಿಶೀಲನೆ ಮಾಡಿ ಶೀಘ್ರವಾಗಿ ಆ ಜಮೀನು ಯಾರದ್ದು ಎನ್ನತಕ್ಕಂಥಾದ್ದನ್ನು ತಿಳಿದು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ವಿಭಾಗದ ಬಿಳಿನೆಲೆ ಗ್ರಾಮದ ನೆಟ್ಟಣಿಕೆ ಎಂಬಲ್ಲಿ ಮೆ : ಇಂಡಿಯನ್ ಪ್ಲೈವುಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಸುಬ್ರಹ್ಮಣ್ಯ ವಲಯದ ಮುಜೂರು ಮೀಸಲು ಅರಣ್ಯದಲ್ಲಿ ಪ್ಲೈವುಡ್ ಫ್ಯಾಕ್ಟರಿಯನ್ನು ನಡೆಸಲು ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಅವಧಿ ಮುಗಿದ ನಂತರ ಪ್ಲೈವುಡ್ ಕಂಪನಿಯನ್ನು 1997ನೇ ಇಸವಿಯಿಂದ ಸಂಪೂರ್ಣವಾಗಿ ಮುಚ್ಚಲಾಗಿತ್ತು. ಆದರೆ ಕಂಪನಿಯ ಕಾರ್ಮಿಕರು ಕಂಪನಿಗೆ ಸೇರಿದ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದುದಾಗಿಯೂ, ಇತ್ತೀಚೆಗೆ ಈ ಕಾರ್ಮಿಕರನ್ನು ಕಂಪನಿಯ ವಸತಿಗೃಹಗಳಿಂದ ತೆರವುಗೊಳಿಸಿರುವುದಾಗಿ ತಿಳಿದುಬಂದಿರುತ್ತದೆ. ವಸತಿ ಗೃಹಗಳಿಂದ ತೆರವುಗೊಳಿಸಿದ ಸುಮಾರು 25-30 ಜನ ಕಾರ್ಮಿಕರ ಗುಂಪೊಂದು ಮುಜೂರು ಸುರಕ್ಷಿತ ಅರಣ್ಯದ ಮಧ್ಯೆ ಹಾದುಹೋಗುವ ರೈಲು ನಿಲ್ದಾಣದ ಪಕ್ಕದಲ್ಲಿ ಸರ್ವೆ ನಂಬರ್ 2ರಲ್ಲಿ ದಿನಾಂಕ 11.7.2002ರಂದು ಮೀಸಲು ಅರಣ್ಯ ಪ್ರದೇಶದೊಳಗೆ ಅತಿಕ್ರಮಣಕ್ಕೆ ಮುಂದಾಗಿರುತ್ತಾರೆ. ಇದನ್ನು ತಿಳಿದ ಸ್ಥಳೀಯ ಅರಣ್ಯ ಇಲಾಖೆಯ ಸಿಬ್ಬಂದಿಯವರು ತಾತ್ಕಾಲಿಕ ಶೆಡ್ ನಿರ್ಮಾಣದ ಗುರಿ ಹೊಂದಿರುವ ಈ ಕಾರ್ಮಿಕರು ಅತಿಕ್ರಮಣಕ್ಕೆ ಪ್ರಯತ್ನಿಸಿರುವುದನ್ನು ಸಕಾಲಿಕವಾಗಿ ತಡೆಗಟ್ಟಿದ್ದಾರೆ. ಬಿಳಿನೆಲೆ ಗ್ರಾಮದ ಸರ್ವೆನಂಬರ್ 2 - ಮುಜೂರು ಮೀಸಲು ಅರಣ್ಯ ಪ್ರದೇಶ ಆಗಿದ್ದು ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ. ಆದ್ದರಿಂದ ಇದು ಅಕ್ರಮವಾಗಿ ಏನೂ ಅಲ್ಲ ; ಕ್ರಮವಾಗಿಯೇ ಅವರು ನಿಲ್ಲಿಸಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅರಣ್ಯ ಸಚಿವರಿಗೆ ಸಂಬಂಧಪಟ್ಟ ಅದರ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ. ಆರ್.ಟಿ.ಸಿ ಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ :- ಅದು ರೈಲ್ವೆ ಸ್ಟೇಷನ್ ಪಕ್ಕದಲ್ಲೇ ಇದೆಯೆಂದು ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :- ನಾನು ಹೋಗಿ ನೋಡಿದ್ದೇನೆ. ತಾವು ಬೇಕಾದರೆ ಯಾರಾದರೂ ಬೇರೆಯವರನ್ನು ಕಳುಹಿಸಿಕೊಡಬಹುದು. ನಾನು ಸ್ಥಳಕ್ಕೆ ಹೋಗಿದ್ದೇನೆ. ಅದು ಸುಮಾರು 150 ಮೀಟರ್ ದೂರದಲ್ಲಿದೆ. ಎರಡನೆಯದಾಗಿ ಸರ್ವೆ ನಂಬರ್ 2 ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಾಗವೇ ಅಲ್ಲ. ಅದು ಸರ್ಕಾರದ ಅನಾಧೀನವಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳೂ ಕೂಡ ಸ್ಥಳ ಪರಿಶೀಲನೆ ಮಾಡಿ ಅದನ್ನು ಮೆಷರ್‌ಮೆಂಟ್ ಮಾಡಿ

ಕೊಡಿಸಿದ್ದಾರೆ. ಅದರ ನಂತರ ಅಧಿಕಾರಿಗಳು ಬಂದಿದ್ದಾರೆ. ತಾವು ದಯವಿಟ್ಟು ಪರಿಶೀಲನೆ ಮಾಡಿ.

ಶ್ರೀ ಕೆ.ಹೆಚ್. ರಂಗನಾಥ್ :- ಒಂದೊಂದು ಸಾರಿ ಏನಾಗುತ್ತದೆ ಎಂದರೆ ಮ್ಯೂಟೇಶನ್ಸ್ ಅಪ್‌ಟುಡೇಟ್ ಆಗಿರುವುದಿಲ್ಲ. ಹೀಗಾಗಿ ಗೊಂದಲ ಇದೆ. ನಾನು ತರಿಸಿ ನೋಡುತ್ತೇನೆ.

ಅಧ್ಯಕ್ಷರು :- ಇನ್ನು ಮುಂದೆ ಶ್ರೀ ಆತ್ಮಾನಂದ ಮತ್ತು ಶ್ರೀ ಶ್ರೀನಿವಾಸಗೌಡ ಅಷ್ಟೇ ಇರುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ನನ್ನ ಕ್ಷೇತ್ರದಲ್ಲಿ ಅನಿರೀಕ್ಷಿತ ಘಟನೆಯಾಗಿ ಕಾಡಾನೆಗಳಿಂದ ಪ್ರಾಣ ಹಾನಿಯಾಗಿದೆ.....

ಅಧ್ಯಕ್ಷರು :- ಇವತ್ತು ನೋಟೀಶ್ ಕೊಟ್ಟು ಇವತ್ತೇ ಎತ್ತುವುದಕ್ಕೆ ಆಗುತ್ತಾ ? ನಿಮಗಿಂತ ಮೊದಲು ಕೊಟ್ಟವರ ಗತಿ ಏನಾಗಬೇಕು ? ನೀವು ನಾಳೆ ಪ್ರಸ್ತಾಪ ಮಾಡಿ.

(೫) ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಮೈಸೂರು ಸಕ್ಕರೆ ಕಾರ್ಖಾನೆಯಿಂದ ಆಗುತ್ತಿರುವ ತೊಂದರೆ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ :- ಮಂಡ್ಯ ಜಿಲ್ಲೆಯಲ್ಲಿ ಇರತಕ್ಕಂಥ ಕಬ್ಬು ಬೆಳೆಗಾರರ ವಿಶೇಷ ಪರಿಸ್ಥಿತಿಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸಕ್ಕರೆ ಕಾರ್ಖಾನೆಗಳು ಇಷ್ಟರಲ್ಲೇ ಪ್ರಾರಂಭ ಆಗಬೇಕಾಗಿತ್ತು. ಅದರಲ್ಲೂ ವಿಶೇಷವಾಗಿ ಮೈಸೂರು ಸಕ್ಕರೆ ಕಾರ್ಖಾನೆ ಜುಲೈ ಮೊದಲನೇ ವಾರದಲ್ಲಿ ಪ್ರಾರಂಭವಾಗಬೇಕಿತ್ತು. ಕಬ್ಬಿನ ದರ ನಿಗದಿ ಮಾಡದೇ ಇರುವುದರಿಂದ ಕಾರ್ಖಾನೆ ಇನ್ನೂ ಪ್ರಾರಂಭವಾಗದೆ, ಕೃಷ್ಣರಾಜ ಸಾಗರದಲ್ಲಿ ನೀರು ಬರಿದಾಗಿರುವುದರಿಂದ ಬೆಳೆಗಳು ನೀರು ಇಲ್ಲದೆ ತಾಳಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆ ಬೆಳೆಗಳು ಈಗಾಗಲೇ ಒಣಗಿ ಹೋಗಿವೆ. ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿ ಈ ಕಬ್ಬನ್ನು ಉಪಯೋಗಿಸಿಕೊಂಡು ಸಕ್ಕರೆ ಉತ್ಪಾದನೆ ಮಾಡತಕ್ಕಂಥಾದ್ದು ಬಹಳಷ್ಟು ಸೂಕ್ತವಾಗಿರತಕ್ಕಂಥ ಹಿನ್ನೆಲೆಯಲ್ಲಿ ದರ ನಿಗದಿ ಮಾಡಿ ನಮ್ಮ ಮೈಸೂರು ಸಕ್ಕರೆ ಕಾರ್ಖಾನೆಯನ್ನು ತುರ್ತಾಗಿ ಪ್ರಾರಂಭ ಮಾಡಬೇಕೆಂಬುದು ರೈತರ ಆಶಯವಾಗಿರುವುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾ, ಇದೇ ರೀತಿ ಹಾಲಿ ಬೆಳೆದು ನಿಂತಿರತಕ್ಕಂಥ ಕಬ್ಬು ಒಣಗಿ ಹೋಗಿರತಕ್ಕಂಥ ಕಾಲದಲ್ಲಿ ರೈತರು ಹಾಗೂ ಸಕ್ಕರೆ ಕಾರ್ಖಾನೆಯಲ್ಲಿ ಐದಾರು ಕೋಟಿ ರೂಪಾಯಿ ಹಣ ಬಾಕಿ ಬರಬೇಕಾಗಿದೆ. ಈ ಹಿನ್ನೆಲೆಯಲ್ಲಿ ರೈತರು ಪಡೆದಿರತಕ್ಕಂಥ ಕೃಷಿ ಸಾಲವನ್ನು ಮುಂದೆಕ್ಕೆ ಹಾಕಬೇಕು ಹಾಗೂ ನೀರಿನ ದರದ ರಿಯಾಯ್ತಿಯನ್ನು ಸಾಕಷ್ಟು ಸಂಕಷ್ಟದಲ್ಲಿರುವ ರೈತರಿಗೆ ಕೊಟ್ಟು ನೆರವು ನೀಡಬೇಕು ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ಸರ್ಕಾರಲ್ಲಿ ನಿವೇದನೆ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :- ಏನಾದರೂ ಹೇಳುತ್ತೀರಾ ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಮಂತ್ರಿ) :- ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಂಪನಿ 2002-03ನೇ ಸಾಲಿಗೆ ಕಬ್ಬು ಅರೆಯುವ ಹಂಗಾಮವನ್ನು